# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **56** |
| ಸದಸ್ಯರ ಹೆಸರು | : | ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 11-08-2025 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ರೈತರ ಪಂಪ್‌ಸೆಟ್‌ಗಳಿಗೆ ನೀಡಲಾಗುವ ಉಚಿತ ಮೆಗಾವ್ಯಾಟ್ ವಿದ್ಯುತ್ ಹೆಚ್ಚಳ ಮಾಡುವಂತೆ ಬೇಡಿಕೆ ಇಟ್ಟಿರುವುದು ನಿಜವೇ; | ರಾಜ್ಯದಲ್ಲಿ 10 ಹೆಚ್.ಪಿ. ವರೆಗಿನ ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ದಿನವಹಿ 7 ಗಂಟೆಗಳ ಅವಧಿಗೆ ಉಚಿತ ವಿದ್ಯುತ್‌ನ್ನು ಸರ್ಕಾರದಿಂದ ನೀಡಲಾಗುತ್ತಿದ್ದು ಹೆಚ್ಚಳ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |
| ಆ) | ರೈತರು ತಮ್ಮ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಅಕ್ರಮ-ಸಕ್ರಮ ಯೋಜನೆ 2005 ರಿಂದ ಜಾರಿಯಲ್ಲಿದ್ದರೂ ಅನುಷ್ಠಾನ ಪ್ರಕ್ರಿಯೆ ವಿಳಂಬದಿಂದಾಗಿ ರೈತರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಅಕ್ರಮ ಸಕ್ರಮ ಸೇರಿದಂತೆ, ರೈತರು ತಮ್ಮ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕೋರಿ ಸ್ವೀಕೃತವಾದ ಅರ್ಜಿಗಳ ಸಂಖ್ಯೆ ಹಾಗೂ ಮೂಲಭೂತಸೌಕರ್ಯ ಕಲ್ಪಿಸಿರುವ ಮಾಹಿತಿಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ. |
| ಇ) | ಬಂದಿದ್ದಲ್ಲಿ, 2005 ರಿಂದ ಇಲ್ಲಿಯವರೆಗೆ ಅನಧಿಕೃತ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸುವಂತೆ ರಾಜ್ಯದಲ್ಲಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ ಎಷ್ಟು; ರಾಜ್ಯದಲ್ಲಿ ಎಷ್ಟು ಪಂಪ್‌ಸೆಟ್‌ಗಳಿಗೆ ಸಕ್ರಮ ಮಾಡಲಾಗಿದೆ; ಇನ್ನೂ ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | |

| | | |
|---|---|---|
| ಈ) | ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಅಕ್ರಮ-ಸಕ್ರಮ ಯೋಜನೆಯಡಿಯಲ್ಲಿ ರೈತರ ಅನುಕೂಲಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳೇನು ಯೋಜನೆಗಳಾವುವು? (ಸಂಪೂರ್ಣ ಮಾಹಿತಿ ಒದಗಿಸುವುದು) | ಪ್ರಸ್ತುತ, ಅಕ್ರಮ ಸಕ್ರಮ ಯೋಜನೆ ಜಾರಿಯಲ್ಲಿರುವುದಿಲ್ಲ. ಅಕ್ರಮವಾಗಿ ವಿದ್ಯುತ್ ಸಂಪರ್ಕ ಶಿಕ್ಷಾರ್ಹ ಅಪರಾಧ ಎಂದು ಗ್ರಾಹಕರಿಗೆ ಮನವರಿಕೆ ಮಾಡಿಕೊಡಲಾಗುತ್ತಿದ್ದು, ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆಯುವವರ ವಿರುದ್ಧ ನಿಯಾಮಾನುಸಾರ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲಾಗುತ್ತಿದೆ.<br><br>ರೈತರ ನೀರಾವರಿ ಪಂಪ್‌ಸೆಟ್‌ಗಳನ್ನು ವ್ಯವಸ್ಥಿತವಾಗಿ ವಿದ್ಯುತ್ ಜಾಲಕ್ಕೆ ಸೇರ್ಪಡೆಗೊಳಿಸಲು ಮತ್ತು Solar off grid / Stand-alone ಪಂಪ್‌ಗಳನ್ನು ಅಳವಡಿಸುವ ಮೂಲಕ ಹಗಲಿನ ವೇಳೆಯಲ್ಲಿಯೇ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಸುವ ಉದ್ದೇಶದಿಂದ ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ/ ವಿಎಸ್‌ಸಿ/214/2023, ದಿನಾಂಕ:07.10.2023 ರಂದು ಹೊರಡಿಸಲಾಗಿದೆ. ಅದರಂತೆ,<br><br>1. ವಿದ್ಯುತ್ ಸರಬರಾಜು ಕಂಪನಿಗಳು ಸಕ್ರಮಗೊಳಿಸಿದ ಕೃಷಿ ಪಂಪ್ ಸೆಟ್ ಗಳಿಗೆ 2022-23 ಮತ್ತು 2023-24 ರಲ್ಲಿ ಟೆಂಡರ್ ಮೂಲಕ ಮೂಲಸೌಕರ್ಯಗಳನ್ನು ಕಲ್ಪಿಸುವ ಸಲುವಾಗಿ ಟೆಂಡರ್ ಕರೆಯಲಾದ ಅಂದಾಜುಪಟ್ಟಿಯನ್ನು ಪುನರ್ ಪರಿಶೀಲಿಸಿ, ಪಂಪ್ ಸೆಟ್ ಗಳು ಹಾಲಿ ಇರುವ ವಿದ್ಯುತ್ ಜಾಲದಿಂದ 500 ಮೀಟರ್ ಯಿಂದಾಚೆಯಿದ್ದಲ್ಲಿ, Solar Stand -alone /off grid ಪಂಪ್ ಅಳವಡಿಸಲು ಕ್ರಮವಹಿಸಲಾಗುತ್ತಿದೆ ಮತ್ತು 500 ಮೀಟರ್ ಒಳಗಿರುವ ಪಂಪ್‌ಸೆಟ್ ಗಳಿಗೆ ಕನಿಷ್ಟ ಅವಶ್ಯಕತೆಗೆ ತಕ್ಕಂತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ವಿದ್ಯುತ್ ಸರಬರಾಜು ಕಂಪನಿಗಳು ಕ್ರಮವಹಿಸುತ್ತಿವೆ.<br><br>2. ಸೌರ ಪಂಪ್‌ಸೆಟ್ ಗಳನ್ನು ಉತ್ತೇಜಿಸಲು ಕೇಂದ್ರ ಸರ್ಕಾರದಿಂದ ಶೇ. 30 ರಷ್ಟು ಸಹಾಯಧನ ಅಲ್ಲದೆ ರಾಜ್ಯ ಸರ್ಕಾರದಿಂದ ಶೇ. 30 ರಷ್ಟು ಇರುವ ಸಹಾಯಧನವನ್ನು ಶೇ. 50 ಕ್ಕೆ ಹೆಚ್ಚಿಸಿ ಸರ್ಕಾರ ಅನುಮೋದಿಸಿದೆ. ರೈತರು ಈಗಾಗಲೇ ವಿದ್ಯುತ್ ಸಂಪರ್ಕಕ್ಕಾಗಿ ಮೊತ್ತವನ್ನು ಪಾವತಿಸಿದ್ದರೆ, ಪಾವತಿಸಿದ ಮೊತ್ತವನ್ನು ರೈತರ ವಂತಿಗೆ ಎಂದು ಪರಿಗಣಿಸಿ, ಸೌರ ಪಂಪ್‌ಸೆಟ್ ಗಳನ್ನು ಅಳವಡಿಸಬೇಕಾಗಿದೆ. |

| | | |
|---|---|---|
| | | ➢ ಇದಲ್ಲದೇ, ರೈತರಿಗೆ ಅನುಕೂಲ ಮಾಡಿಕೊಡಲು ದಿನಾಂಕ: 15.04.2025 ರಿಂದ ನವೀಕೃತ ಶೀಘ್ರ ಸಂಪರ್ಕ ಯೋಜನೆಯನ್ನು (NSSY) ಜಾರಿಗೊಳಿಸಲಾಗಿದ್ದು, ರೈತರು ಇಚ್ಛಿಸಿದಲ್ಲಿ HT/LT ಮಾರ್ಗಗಳ ವಿಸ್ತರಣೆಯ ಕಾಮಗಾರಿಯನ್ನು ತಮ್ಮ ಸ್ವಂತ ಖರ್ಚಿನಲ್ಲಿ ನಿರ್ವಹಿಸಿದ ನಂತರ (ರೂ.15,000/- ಮತ್ತು KERC ನಿಯಮಾವಳಿಗಳಂತೆ ಠೇವಣಿ ಹಣವನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿ ಮಾಡುವುದರೊಂದಿಗೆ) ವಿದ್ಯುತ್ ಸರಬರಾಜು ಕಂಪನಿಗಳಿಂದ ಸೂಕ್ತ ಸಾಮರ್ಥ್ಯದ ಪರಿವರ್ತಕವನ್ನು (TC) 2 ಅಥವಾ ಹೆಚ್ಚಿನ ಸಂಖ್ಯೆಯ ಪಂಪ್‌ಸೆಟ್‌ಗಳನ್ನು ಒಟ್ಟುಗೂಡಿಸಿ ವಿದ್ಯುತ್ ಸಂಪರ್ಕ ನೀಡಲಾಗುವುದು.<br>➢ ತಾಂತ್ರಿಕ ಸಾಧ್ಯತೆಯಿರುವಲ್ಲಿ, ಹಾಲಿ ಇರುವ ಎಲ್.ಟಿ ಜಾಲದಿಂದ service main ಮೂಲಕ ಅಥವಾ ಎಲ್.ಟಿ ಮಾರ್ಗ ವಿಸ್ತರಣೆಯೊಂದಿಗೆ ಸ್ವಯಂ ಕಾರ್ಯ ನಿರ್ವಹಣೆ ಅಡಿಯಲ್ಲಿ ವಿದ್ಯುತ್ ಸಂಪರ್ಕ ಪಡೆಯುವ ರೈತರು ಸಹ ರೂ.15,000/- ಮತ್ತು ಠೇವಣಿ ಹಣ ಪಾವತಿಸುವುದು. ಅಂತಹ ರೈತರು ನವೀಕೃತ ಶೀಘ್ರ ಸಂಪರ್ಕ ಯೋಜನೆಯ ವ್ಯಾಪ್ತಿಗೆ ಒಳಪಡುವುದಿಲ್ಲ. |

ಸಂಖ್ಯೆ: ಎನರ್ಜಿ 159 ಇಬಿಎಸ್ 2025

(ಕೆ.ಜೆ.ಜಾರ್ಜ್) 12/8/2

ಇಂಧನ ಸಚಿವರು

**ದಿನಾಂಕ: 22.09.2023 ರಿಂದ 31-07-2025ರ ಅಂತ್ಯಕ್ಕೆ ವಿದ್ಯುತ್ ಸಂಪರ್ಕ ಕೋರಿ ರೈತರಿಂದ ಸ್ವೀಕೃತಗೊಂಡಿರುವ ಅರ್ಜಿಗಳ ಕಂಪನಿವಾರು ವಿವರಗಳು ಕೆಳಕಂಡಂತಿವೆ**

| ಕ್ರ. ಸಂ. | ಜಿಲ್ಲೆಗಳ ಹೆಸರು | 22.09.2023 ರಿಂದ 31-07-2025 ರವರೆಗೆ ನೋಂದಣಿ ಗೊಂಡಿರುವ ಅರ್ಜಿಗಳ ಸಂಖ್ಯೆ | 31-07-2025 ರ ಅಂತ್ಯಕ್ಕೆ ಸರ್ವೀಸ್ ಮೇನ್ ನಿಂದ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುವ ಅರ್ಜಿಗಳ ಸಂಖ್ಯೆ | 31-07-2025 ರ ಅಂತ್ಯಕ್ಕೆ ಸ್ವಯಂ ಕಾರ್ಯನಿರ್ವಹಣೆ ಯೋಜನೆಯಡಿ ಮೂಲಭೂತ ಸೌಕರ್ಯ ಕಲ್ಪಿಸಿಕೊಂಡಿ ರುವ ಅರ್ಜಿಗಳ ಸಂಖ್ಯೆ | 31-07-2025 ರ ಅಂತ್ಯಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು ಬಾಕಿ ಇರುವ ಅರ್ಜಿಗಳ ಸಂಖ್ಯೆ |
|---|---|---|---|---|---|
| | **ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ** | | | | |
| 1 | ಬೆಂಗಳೂರು ನಗರ | 142 | 93 | 38 | 11 |
| 2 | ಬೆಂಗಳೂರು ಗ್ರಾಮೀಣ | 818 | 0 | 454 | 364 |
| 3 | ರಾಮನಗರ | 998 | 0 | 400 | 598 |
| 4 | ತುಮಕೂರು | 7,931 | 0 | 5,515 | 2,416 |
| 5 | ಕೋಲಾರ | 736 | 0 | 322 | 414 |
| 6 | ಚಿಕ್ಕಬಳ್ಳಾಪುರ | 833 | 0 | 242 | 591 |
| 7 | ದಾವಣಗೆರೆ | 3,115 | 0 | 3,037 | 78 |
| 8 | ಚಿತ್ರದುರ್ಗ | 2,525 | 0 | 1,999 | 526 |
| | ಒಟ್ಟು(ಬೆವಿಕಂ) | 17,098 | 93 | 12,007 | 4,998 |
| | **ಚಾವಿಸನಿನಿ** | | | | |
| 1 | ಮೈಸೂರು | 16,075 | 12,617 | 2,144 | 1,314 |
| 2 | ಚಾಮರಾಜನಗರ | 3,060 | 1,697 | 241 | 1,122 |
| 3 | ಕೊಡಗು | 2,119 | 623 | 425 | 1,071 |
| 4 | ಮಂಡ್ಯ | 1,162 | 215 | 448 | 499 |
| 5 | ಹಾಸನ | 5,417 | 1,222 | 1,312 | 2,883 |
| | ಒಟ್ಟು(ಚಾವಿಸನಿನಿ) | 27,833 | 16,374 | 4,570 | 6,889 |
| | **ಹೆಸ್ಕಾಂ** | | | | |
| 1 | ಧಾರವಾಡ | 648 | 168 | 197 | 283 |
| 2 | ಗದಗ | 594 | 162 | 330 | 102 |
| 3 | ಹಾವೇರಿ | 1,085 | 182 | 445 | 458 |
| 4 | ಉತ್ತರ ಕನ್ನಡ | 6,639 | 6,264 | 374 | 1 |
| 5 | ಬೆಳಗಾವಿ | 3,003 | 55 | 1,568 | 1,380 |
| 6 | ವಿಜಯಪುರ | 1,984 | 0 | 1,553 | 431 |
| 7 | ಬಾಗಲಕೋಟ | 942 | 0 | 675 | 267 |
| | ಒಟ್ಟು( ಹೆಸ್ಕಾಂ ) | 14,895 | 6,831 | 5,142 | 2,922 |
| | **ಮೆಸ್ಕಾಂ** | | | | |
| 1 | ದಕ್ಷಿಣ ಕನ್ನಡ | 10,405 | 6,964 | 1,451 | 1,990 |
| 2 | ಉಡುಪಿ | 5,929 | 3,539 | 1,157 | 1,233 |
| 3 | ಶಿವಮೊಗ್ಗ | 10,711 | 6,095 | 551 | 4,065 |
| 4 | ಚಿಕ್ಕಮಗಳೂರು | 4,296 | 1,636 | 419 | 2,241 |
| | ಒಟ್ಟು(ಮೆಸ್ಕಾಂ) | 31,341 | 18,234 | 3,578 | 9,529 |
| | **ಜೆಸ್ಕಾಂ** | | | | |
| 1 | ಕಲಬುರಗಿ | 346 | 0 | 295 | 51 |
| 2 | ಯಾದಗಿರ | 74 | 0 | 56 | 18 |
| 3 | ಬೀದರ್ | 388 | 0 | 97 | 291 |
| 4 | ರಾಯಚೂರು | 252 | 0 | 61 | 191 |
| 5 | ಕೊಪ್ಪಳ | 1,348 | 0 | 965 | 383 |
| 6 | ಬಳ್ಳಾರಿ | 318 | 0 | 246 | 72 |
| 7 | ವಿಜಯನಗರ | 81 | 0 | 31 | 50 |
| | ಒಟ್ಟು(ಜೆಸ್ಕಾಂ) | 2,807 | 0 | 1,751 | 1,056 |
| | **ಒಟ್ಟು** | **93,974** | **41,532** | **27,048** | **25,394** |

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಪಿ. ಹೆಚ್.ಪೂಜಾರ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 56 ಕ್ಕೆ

ಅನುಬಂಧ

ಉಪ ಪ್ರಶ್ನೆ(ಇ)

**ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ 2005 ರಿಂದ 22-09-2023 ರವರೆಗೆ ವಿದ್ಯುತ್ ಸಂಪರ್ಕ ಕೋರಿ ರೈತರಿಂದ ಸ್ವೀಕೃತಗೊಂಡಿರುವ ಅರ್ಜಿಗಳ ಕಂಪನಿವಾರು ವಿವರಗಳು ಕೆಳಕಂಡಂತಿವೆ**

| ಕ್ರ. ಸಂ. | ಜಿಲ್ಲೆಗಳ ಹೆಸರು | 2005 ರಿಂದ 22-09-2023 ರವರೆಗೆ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕಕ್ಕಾಗಿ ಹಣ ಪಾವತಿಸಿರುವ ಅರ್ಜಿದಾರರ ಸಂಖ್ಯೆ | 31-07-2025 ರ ಅಂತ್ಯಕ್ಕೆ ಮೂಲಭೂತ ಸೌಕರ್ಯ ಕಲ್ಪಿಸಲಾಗಿರುವ ಕೃಷಿ ಪಂಪ್‌ಸೆಟ್‌ಗಳ ಸಂಖ್ಯೆ | ಮೂಲಭೂತ ಸೌಕರ್ಯ ಕಲ್ಪಿಸಲು 31-07-2025 ರ ಅಂತ್ಯಕ್ಕೆ ಬಾಕಿ ಇರುವ ಕೃಷಿ ಪಂಪ್‌ಸೆಟ್‌ಗಳ ಸಂಖ್ಯೆ |
|---|---|---|---|---|
| **ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ** | | | | |
| 1 | ಬೆಂಗಳೂರು ನಗರ | 5,843 | 5,766 | 77 |
| 2 | ಬೆಂಗಳೂರು ಗ್ರಾಮೀಣ | 18,626 | 17,440 | 1,186 |
| 3 | ರಾಮನಗರ | 32,642 | 30,245 | 2,397 |
| 4 | ತುಮಕೂರು | 1,48,206 | 1,19,193 | 29,013 |
| 5 | ಕೋಲಾರ | 28,907 | 25,537 | 3,370 |
| 6 | ಚಿಕ್ಕಬಳ್ಳಾಪುರ | 30,504 | 27,287 | 3,217 |
| 7 | ದಾವಣಗೆರೆ | 76,619 | 58,312 | 18,307 |
| 8 | ಚಿತ್ರದುರ್ಗ | 75,386 | 48,747 | 26,639 |
| | **ಒಟ್ಟು(ಬೆವಿಕಂ)** | **4,16,733** | **3,32,527** | **84,206** |
| **ಚಾವಿಸನಿನಿ** | | | | |
| 1 | ಮೈಸೂರು | 73,440 | 73,186 | 254 |
| 2 | ಚಾಮರಾಜನಗರ | 20,599 | 20,343 | 256 |
| 3 | ಕೊಡಗು | 6,042 | 6,042 | 0 |
| 4 | ಮಂಡ್ಯ | 53,773 | 51,086 | 2,687 |
| 5 | ಹಾಸನ | 75,685 | 72,184 | 3,501 |
| | ಒಟ್ಟು(ಚಾವಿಸನಿನಿ) | 2,29,539 | 2,22,841 | 6,698 |
| **ಹೆಸ್ಕಾಂ** | | | | |
| 1 | ಧಾರವಾಡ | 20,890 | 15,079 | 5,811 |
| 2 | ಗದಗ | 17,057 | 9,516 | 7,541 |
| 3 | ಹಾವೇರಿ | 52,268 | 26,748 | 25,520 |
| 4 | ಉತ್ತರ ಕನ್ನಡ | 37,671 | 34,264 | 3,407 |
| 5 | ಬೆಳಗಾವಿ | 1,49,495 | 1,19,396 | 30,099 |
| 6 | ವಿಜಯಪುರ | 1,06,894 | 78,120 | 28,774 |
| 7 | ಬಾಗಲಕೋಟ | 54,422 | 50,299 | 4,123 |
| | ಒಟ್ಟು( ಹೆಸ್ಕಾಂ ) | 4,38,697 | 3,33,422 | 1,05,275 |
| **ಮೆಸ್ಕಾಂ** | | | | |
| 1 | ದಕ್ಷಿಣ ಕನ್ನಡ | 68,048 | 68,017 | 31 |
| 2 | ಉಡುಪಿ | 24,419 | 24,398 | 21 |
| 3 | ಶಿವಮೊಗ್ಗ | 64,864 | 51,369 | 13,495 |
| 4 | ಚಿಕ್ಕಮಗಳೂರು | 32,715 | 23,608 | 9,107 |
| | ಒಟ್ಟು(ಮೆಸ್ಕಾಂ) | 1,90,046 | 1,67,392 | 22,654 |
| **ಜೆಸ್ಕಾಂ** | | | | |
| 1 | ಕಲಬುರಗಿ | 17,711 | 16,435 | 1,276 |
| 2 | ಯಾದಗಿರ | 9,545 | 8,587 | 958 |
| 3 | ಬೀದರ್ | 15,660 | 14,611 | 1,049 |
| 4 | ರಾಯಚೂರು | 4,589 | 4,529 | 60 |
| 5 | ಕೊಪ್ಪಳ | 12,548 | 12,451 | 97 |
| 6 | ಬಳ್ಳಾರಿ | 2,275 | 2,103 | 172 |
| 7 | ವಿಜಯನಗರ | 10,264 | 8,863 | 1,401 |
| | ಒಟ್ಟು(ಜೆಸ್ಕಾಂ) | 72,592 | 67,579 | 5,013 |
| | **ಒಟ್ಟು** | **13,47,607** | **11,23,761** | **2,23,846** |